


# ಈ ಕಾಲದ ಬಂಗಾರ!

ತೆರೆಗೆ ಸಿದ್ಧವಾಗಿರುವ 'ಬಂಗಾರ ಸನ್ ಆಫ್ ಬಂಗಾರದ ಮನುಷ್ಯ', ರಾಜ್ ನಟನೆಯ 'ಬಂಗಾರದ ಮನುಷ್ಯ' ಚಿತ್ರವನ್ನು ನೆನಪಿಸುತ್ತಿದೆ. ಹೊಸ ಚಿತ್ರವೊಂದು ಹಳೆಯ ಕಲಾಕೃತಿಯನ್ನು ನೆನಪಿಸುವುದು ಚರಿತ್ರೆಯೊಂದಿಗಿನ ವರ್ತಮಾನದ ಅನುಸಂಧಾನದಂತಿದೆ.

ನಾಲ್ಕೂವರೆ ದಶಕಗಳ ಹಿಂದೆ (1972) ತೆರೆ ಕಂಡ 'ಬಂಗಾರದ ಮನುಷ್ಯ' ಕನ್ನಡದ ಅತ್ಯುತ್ತಮ ಚಿತ್ರಗಳಲ್ಲೊಂದು. 104 ವಾರಗಳ ದಾಖಲೆ ಪ್ರದರ್ಶನ ಕಂಡ ಈ ಸಿನಿಮಾ ರೈತಾಪಿ ಕುಟುಂಬದ ಏಳುಬೀಳುಗಳ ಕಥೆ. ಗ್ರಾಮಜೀವನದ ನೋವು–ಚೆಲುವುಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದ ಈ ಸಿನಿಮಾ ಅನೇಕ ವಿದ್ಯಾವಂತರನ್ನು ನೇಗಿಲು ಹಿಡಿಯಲು ಪ್ರೇರೇಪಿಸಿತ್ತು. ಈ ವಿಶಿಷ್ಟ ಚಿತ್ರದ ನೆನಪು ಮರುಕಳಿಸಲು ಕಾರಣ – ಶಿವರಾಜ್ ಕುಮಾರ್ ನಟನೆಯ 'ಬಂಗಾರ ಸನ್ ಆಫ್ ಬಂಗಾರದ ಮನುಷ್ಯ'.

ರಾಜ್‌ಕುಮಾರ್ ನಟನೆಯ 'ಬಂಗಾರದ ಮನುಷ್ಯ' ಚಿತ್ರದ ಶೀರ್ಷಿಕೆಯನ್ನು ಶಿವರಾಜ್ ಸಿನಿಮಾ ನೆನಪಿಸುವಂತಿದೆ. ಅಷ್ಟು ಮಾತ್ರವಲ್ಲ, ಈ ಚಿತ್ರ ಕೂಡ ರೈತರ ಬದುಕಿನ ಬಗ್ಗೆ ಮಾತನಾಡುತ್ತದೆಯಂತೆ. ಗ್ರಾಮಜೀವನದ ಕಥನಗಳೇ ಗಾಂಧಿನಗರದಲ್ಲಿ ಅಪರೂಪವಾಗುತ್ತಿರುವ ಸಂದರ್ಭದಲ್ಲಿ 'ಸನ್ ಆಫ್ ಬಂಗಾರದ ಮನುಷ್ಯ' ರೈತರ ಬಗ್ಗೆ ದನಿಯೆತ್ತುತ್ತಿರುವುದು ವಿಶೇಷವಾಗಿದೆ.

ಯೋಗಿ ಜಿ. ರಾಜ್ ಈ ಚಿತ್ರದ ನಿರ್ದೇಶಕರು. ಗಣೇಶ್ ನಟನೆಯ 'ಖುಷಿ ಖುಷಿಯಲಿ' ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ. ಶಿವರಾಜ್ ನಟನೆಯ ಚಿತ್ರದ ಮೂಲಕ ಯೋಗಿ ತಮ್ಮ ವೃತ್ತಿಜೀವನದಲ್ಲಿ ತಿರುವು ಕಂಡುಕೊಳ್ಳುವ ನಿರೀಕ್ಷೆಯಲ್ಲಿದ್ದಾರೆ.

ರೈತಾಪಿ ಮಂದಿಯ ಕಥೆಯಿದ್ದರೂ, ತಮ್ಮ ಚಿತ್ರಕ್ಕೂ ಸಿದ್ದಲಿಂಗಯ್ಯ ನಿರ್ದೇಶನದ 'ಬಂಗಾರದ ಮನುಷ್ಯ' ಸಿನಿಮಾಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಯೋಗಿ ಸ್ಪಷ್ಟಪಡಿಸಿದ್ದಾರೆ. ಆದರೆ, ರಾಜ್ ಸಿನಿಮಾದ ಆಶಯ ಹಾಗೂ ರಾಜೀವ ಪಾತ್ರದ ಉದಾತ್ತ ವ್ಯಕ್ತಿತ್ವ ಹೊಸ ಚಿತ್ರದಲ್ಲೂ ಮುಂದುವರಿದಿರುವುದು ಗುಟ್ಟಾಗಿಯೇನೂ ಉಳಿದಿಲ್ಲ. ಪ್ರಸ್ತುತ ರೈತಾಪಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನು ಯೋಗಿ ಚಿತ್ರದಲ್ಲಿ ಪ್ರಸ್ತಾಪಿಸಿದ್ದಾರಂತೆ.

ಶಿವಣ್ಣ ಕೂಡ ತಮ್ಮ ಪಾತ್ರದ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದಾರೆ. ಈ ಚಿತ್ರದಲ್ಲಿ ಅವರದು ಅನಿವಾಸಿ ಭಾರತೀಯನ ಪಾತ್ರ. ಸಾಮಾನ್ಯ ಜನರ ಆಶೋತ್ತರಗಳಿಗೆ ಸ್ಪಂದಿಸುವ ಪಾತ್ರ ಅವರಿಗೆ ಖುಷಿ ಕೊಟ್ಟಿದೆ.

ವಿದ್ಯಾ ಪ್ರದೀಪ್ 'ಬಂಗಾರದ ಮನುಷ್ಯ'ನ ಮಗನಿಗೆ ನಾಯಕಿ. ತಮಿಳು ಚಿತ್ರಗಳಲ್ಲಿ ಪರಿಚಿತ ಮುಖವಾದ ವಿದ್ಯಾ ಅವರಿಗೆ ಕನ್ನಡದಲ್ಲಿದು ಮೊದಲ ಸಿನಿಮಾ. ಉಳಿದಂತೆ, ಶ್ರೀನಿವಾಸಮೂರ್ತಿ, ಶಿವರಾಂ, ಶ್ರೀನಾಥ್, ಹೊನ್ನವಳ್ಳಿ ಕೃಷ್ಣ ಮುಂತಾದವರು ತಾರಾಗಣದಲ್ಲಿದ್ದಾರೆ. ಹರಿಕೃಷ್ಣರ ಸಂಗೀತ ಹಾಗೂ ಜೈ ಆನಂದ್ ಛಾಯಾಗ್ರಹಣ ಚಿತ್ರಕ್ಕಿದೆ.

ಪುನೀತ್ ನಟನೆಯ 'ರಾಜ್‌ಕುಮಾರ' ಸಿನಿಮಾ ಕಳೆದ ವಾರವಷ್ಟೇ 50 ದಿನಗಳನ್ನು ಪೂರೈಸಿದೆ. ರಾಜ್ ನಟನೆಯ 'ಕಸ್ತೂರಿ ನಿವಾಸ' ಚಿತ್ರವನ್ನು ನೆನಪಿಸುವಂತಿರುವ 'ರಾಜ್‌ಕುಮಾರ' ಕೌಟುಂಬಿಕ ಪ್ರೇಕ್ಷಕರನ್ನು ಮತ್ತೆ ಚಿತ್ರಮಂದಿರಗಳಿಗೆ ಸೆಳೆದಿರುವ ಸಿನಿಮಾ. ಈಗ, ಮೇ 19ರಂದು ತೆರೆ ಕಾಣಲಿರುವ ಶಿವರಾಜ್‌ರ ಸಿನಿಮಾ ರಾಜ್‌ರ ಮತ್ತೊಂದು ಮಹೋನ್ನತ ಸಿನಿಮಾ 'ಬಂಗಾರದ ಮನುಷ್ಯ'ನನ್ನು ನೆನಪಿಸುತ್ತಿದೆ. ಹಳೆಯ ಚಿತ್ರಗಳ ಮರುಕಳಿಕೆಯ ರೂಪದಲ್ಲಿ ರೂಪುಗೊಳ್ಳುತ್ತಿರುವ ಈ ಸಿನಿಮಾಗಳು ಗಾಂಧಿನಗರದಲ್ಲಿ ಹೊಸ ಉತ್ಸಾಹ ಹುಟ್ಟಿಸಿರುವುದಂತೂ ನಿಜ.

■ ರಘು